**ಅಸಲು ದಾವಾ ನಂಃ 210/2012**
**ಡಿ.ಡಬ್ಲ್ಯೂಃ 01**

**<u>ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲು: ಶ್ರೀ ಜಿ.ಆರ್.ಎ., ಪ್ರತಿವಾದಿ ಪರ ವಕೀಲರಿಂದ</u>

ಎಸ್ ಬಿ ಎಂ ಬ್ಯಾಂಕ್ ಇರುವ ಕಟ್ಟಡ ಹಾಗೂ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಡದ ನಕಾಶೆ ಹಾಗೂ ಪರವಾನಿಗೆ ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ನನ್ನ ತಂದೆಯವರು ಸದರಿ ಕಟ್ಟಡಗಳನ್ನು ನಿರ್ಮಿಸುವಾಗ ಪರವಾನಿಗೆ ಹಾಗೂ ನಕಾಶೆಯನ್ನು ಪಡೆದಿರುತ್ತಾರೆ ಆದರೆ ಸದರಿ ದಾಖಲೆಯು ಸಿಕ್ಕಿರುವುದಿಲ್ಲ. ಇತ್ತೀಚಿಗೆ ನಮ್ಮ ಖಾತೆಯ ದಾಖಲೆಯನ್ನು ನಗರಸಭೆಯಿಂದ ಪಡೆದು ಪರಿಶೀಲಿಸಿರುವುದಿಲ್ಲ. ನಾನು ಪ್ರತಿ ವರ್ಷ ಮನೆ ಹಾಗೂ ಕಟ್ಟಡಗಳ ಕಂದಾಯವನ್ನು ಪಾವತಿಸುತ್ತಿದ್ದೇನೆ. ನಾನು ಇತ್ತೀಚಿಗೆ 2024 ನೇ ಏಪ್ರಿಲ್ ಮೇ ಮಾಹೆಯಲ್ಲಿ ಕಂದಾಯವನ್ನು ಪಾವತಿಸಿದ್ದೇನೆ. ಪ್ರತಿ ವರ್ಷ ಕಂದಾಯವನ್ನು ಪಾವತಿಸಿದ್ದರ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಲಾಗಿದೆಯೇ ಎಂದರೆ ಸಾಕ್ಷಿಯು 2024 ರ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. 2012 ರಿಂದ 2024 ರವರೆಗಿನ ಕಂದಾಯ ರಸೀದಿಗಳನ್ನು ಅವಶ್ಯಕತೆ ಇಲ್ಲದ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. 2012 ರಿಂದ 2024 ರವರೆಗಿನ ಎದುರು ದಾವಾ ಸ್ವತ್ತಿನ ಖಾತಾ ಎಕ್ಸ್ ಟ್ರಾಕ್ಟ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರಿದು 2012 ರ ಪೂರ್ವದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)**

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.